community, national gov-
ents and civil society,
g others.

per the report, around 124
n people suffer acute
r in the world, a striking in-
from 80 million two years
hile the reality of hunger
ıder-nutrition continues
e a massive impact on the
eneration. About 151 mil-
ildren are stunted and 51
n children are wasted
the globe. Hard-won gains
ng further threatened by
ct, climate change, poor
ıance, and a host of other
ıges, it added.

the $2 trillion market, according to BNP Paribas.

Tight liquidity and a debt crisis at an infrastructure lender last month sparked a 13% plunge in the S&P BSE Finance Index, the steepest in almost a decade. That aggravated the sell-off in the broader market already reeling under a tumbling rupee and high oil prices. Private lenders, life insurers, mutual fund firms and non-bank finance companies whose assets exceed liabilities maturing over the next year are "comfortably placed," Abhiram Eleswarapu, head of equity research at BNP Paribas Securities India, said in Mumbai.

"If you juxtapose this with their now reduced valuations, some names look interesting," he said in an interview, without identifying any stocks. "It is important not to paint all non-banking finance companies with the same brush."

BNP has added Bajaj Finance, Kotak Mahindra Bank, Reliance Nippon Life Asset Management, SBI Life Insurance Co and HDFC Standard Life Insurance Co to its 'buy' list, according to the brokerage's September 24 report. These stocks tumbled between 11% and 26% last month.

The extent of the price erosion and the spike in volatility has created opportunities for bottom up stock pickers, Eleswarapu said.

The NSE Nifty 50 Index trades at 18 times estimated earnings, higher than the five-year mean, even after the gauge slid into a correction earlier this month. That leaves it vulnerable to further declines, he said.

"The sell-off has made valuation a bit cheaper but the Nifty and the BSE500 indexes are trading well above their historical averages and that hasn't changed in over a year," he said. "So any negative news is not taken kindly. We continue to advocate a bottom-up stock picking approach."

...e in diesel ...es shifts load ...oal-based ...ver plants

...REAU
...Delhi, October 15

...N DIESEL prices is dri-
...ower plants running on
...uel to lower their elec-
... generation levels. Elec-
... production from the
...W of diesel-run power
... have fallen by 37% y-o-
...ss than 80 million units
... in April-September. In
...mber, when the pinch of
... the diesel cost was felt
...ıost in the aforemen-
... monitored period, elec-
... generation was halved
...6 MUs.

...urces said such circum-
...s have put extra pressure
...al-based power plants,
... have ramped up genera-
...y as much as 12% y-o-y
... first fifteen days of Octo-
...ere was a 4% rise in elec-
... generation to 635.6 bil-
... units (BUs) from
...ntional sources in the
...x months of FY19.

A $10-bn clean air push to boost pipe makers

BLOOMBERG
New Delhi/Mumbai,
October 15

STEEL PIPE MAKERS are set to become beneficiaries of India's $10 billion push to expand its natural gas network to more of its urban masses and cut pollution. India has just completed its biggest city gas distribution auction that would extend coverage to more than half of its 1.3 billion people across a third of the nation's area.

This project aims to see 10 million homes linked to gas grids by 2020 and bring relief to smog filled cities.

"There will be a lot of requirement for steel pipelines coming in from next year," said ES Ranganathan, managing director of Indraprastha Gas, which supplies gas for homes and transport in New Delhi and its suburbs. This will require about 12,500 kilometers of pipes within the next three to four years, he said.

India is seeking to double the share of natural gas in the country's energy mix to 15% by 2030, while slashing emissions by a third. The country, which the World Bank said in 2016 was home to 14 of the 30 most polluted cities on the planet, is building gas pipelines and new import facilities to increase use of the fuel. "The gas economy and pipeline industry move in tandem," according to Dinesh Kumar Sarraf, chairman, Petroleum & Natural Gas Regulatory Board.

...al

...India
...nd by
...et liq-
...panies
...of the
...stem.
... have
...stain-
...credit
...Addi-
...urces
...sation

...ty
...0 bil-
...m and
... in the
... mar-
...r fric-
...e now
...eld by
...mand
...o avail
...vithin
... is will
...BI has
... asset

ವಾತಾವರಣ
ಕನಿಷ್ಠ 20, ಗರಿಷ್ಠ 29 ಡಿಗ್ರಿ ಉಷ್ಣಾಂಶವಿದ್ದು, ಆಗಾಗ ಮಳೆಯಾಗುವ ಸಾಧ್ಯತೆ ಇದೆ.

ಜಲಮಂಡಳಿಗೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರ ಸಂಘದ ಪದಾಧಿಕಾರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ರುದ್ರೇಗೌಡ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಎಸ್.ಜಿ.ಮುರಳಿ, ಪ್ರಧಾನ ಕಾರ್ಯದರ್ಶಿಯಾಗಿ ಗೋವಿಂದರಾಜು.ಎ, ಜಂಟಿ ಕಾರ್ಯದರ್ಶಿಯಾಗಿ ಕೂಡಲ ಸಂಗಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಭೈಲಾಂಜನೇಯ, ಖಜಾಂಚಿಯಾಗಿ ಎಸ್.ರವಿಚಂದ್ರ ಸೇರಿದಂತೆ ಇತರರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಮಂಡಳಿ ಸುತ್ತೋಲೆ ಹೊರಡಿಸಿದೆ.

ಕಾನೂನು ಬಾಹಿರವಾಗಿ ಬಡ್ಡಿ ವ್ಯವಹಾರ | ಸಾಲದ ನೆಪದಲ್ಲಿ ವಂಚನೆ

ಕಪಾಲಿ ಮೋಹನ್ ಕಚೇರಿ ಮನೆ ಮೇಲೆ ಸಿಸಿಬಿ ದಾಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾನೂನು ಬಾಹಿರವಾಗಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಆರೋಪದ ಮೇಲೆ ಕಪಾಲಿ ಮೋಹನ್‌ನ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಆರ್.ಜಿ ರಿಕ್ರಿಯೇಷನ್ ಕ್ಲಬ್, ಮನೆ ಹಾಗೂ ಕಚೇರಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ.

ದಾಳಿಯ ಸಮಯದಲ್ಲಿ ಕಪಾಲಿ ಮೋಹನ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಪೊಲೀಸರು ತೀವ್ರ ಶೋಧ ಕಾರ್ಯ ನಡೆಸಿದ್ದಾರೆ. ದಾಳಿಯ ವೇಳೆ ಸಹಿ ಮಾಡಿರುವ ಖಾಲಿ ಚೆಕ್ಕುಗಳು, ಖಾಲಿ ಇ-ಸ್ಟಾಂಪ್ ಪೇಪರ್‌ಗಳು, ಖಾಲಿ ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಮತ್ತು ನೋಟ್‌ಬುಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಎಲ್.ಪಿ.ಓ ರಸ್ತೆ, ಸದಾಶಿವನಗರ, ರಾಜ್‌ಮಹಲ್ ಗುಟ್ಟಹಳ್ಳಿಯ ಮನೆ ಹಾಗೂ ಈತನ ಒಡೆತನದ ಮಹಾಲಕ್ಷ್ಮಿ ಕಾಂಪ್ಲೆಕ್ಸ್, ವಿನಾಯಕ ಸರ್ಕಲ್ ಹಾಗೂ ಪಿ.ಜಿ.ಹಳ್ಳಿಯ ಬಾಲಾಜಿ ಫೈನಾನ್ಸ್ ಎಂಬ ಕಚೇರಿಯ ಮೇಲೆ ದಾಳಿ ನಡೆಸಿದ್ದಾರೆ. ಅಲ್ಲದೆ ಸದಾಶಿವನಗರದ ಬಳಿ ಇರುವ ಕಪಾಲಿ ಹೋಟೆಲ್ ಮೇಲೆ ದಾಳಿ ನಡೆಸಿ ಮೋಹನ್ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಬಂಧನಕ್ಕೆ ಮುಂದಾಗಿದ್ದಾರೆ.

ಕಪಾಲಿ ಮೋಹನ್ ಹಣಕಾಸಿನ ವ್ಯವಹಾರದ ನೆಪದಲ್ಲಿ ಹಣವನ್ನು ಸಾಲವಾಗಿ ಸಾರ್ವಜನಿಕರಿಗೆ ನೀಡಿ, ಅವರಿಂದ ಕಾನೂನು ಬಾಹಿರವಾಗಿ ಅಧಿಕ ಪ್ರಮಾಣದ ಬಡ್ಡಿ ಪಡೆಯುತ್ತಿದ್ದ, ಭದ್ರತೆಗಾಗಿ ನೀಡುತ್ತಿದ್ದ ಖಾಲಿ ಚೆಕ್ ಮತ್ತು ಆನ್ ಡಿಮ್ಯಾಂಡ್ ಪತ್ರಗಳ ಮೇಲೆ ಹೆಚ್ಚಿನ ಮೊತ್ತದ ಹಣ ಬರೆದುಕೊಂಡು ವಂಚಿಸುತ್ತಿದ್ದಾನೆಂಬ ಎಂಬ ಮಾಹಿತಿಯನ್ನು ಆಧರಿಸಿ ಭಾನುವಾರ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಸಿಸಿಬಿ ಪೊಲೀಸರು ನಗರದಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಕ್ಕೆ ಪಣತೊಟ್ಟಿದ್ದಾರೆ.

ಬಲವಂತದಿಂದ ಬಡ್ಡಿ ವಸೂಲಿ

ಈತ ಸಾರ್ವಜನಿಕರಿಗೆ ಹಣವನ್ನು ಸಾಲವಾಗಿ ನೀಡಿ, ಖಾತರಿಗಾಗಿ ಸಾರ್ವಜನಿಕರಿಂದ ಸಹಿ ಮಾತ್ರ ಮಾಡಿರುವ ವಿವಿಧ ಬ್ಯಾಂಕಿನ ಚೆಕ್ಕುಗಳು, ಆಸ್ತಿಯ ದಾಖಲೆಗಳು ಮತ್ತಿತರ ದಾಖಲೆಗಳನ್ನು ಅಡಮಾನ ಇಟ್ಟುಕೊಂಡು ತಿಂಗಳಿಗೆ ಸುಮಾರು ಶೇ.10ರಿಂದ 20 ಪ್ರಮಾಣದಲ್ಲಿ ದುಬಾರಿ ಬಡ್ಡಿಯನ್ನು ಬಲವಂತವಾಗಿ ವಸೂಲಿ ಮಾಡುತ್ತಿದ್ದ. ಈ ರೀತಿ ಖಾಲಿ ಚೆಕ್ ಹಾಗೂ ಆನ್ ಡಿಮ್ಯಾಂಡ್‌ಗಳಿಗೆ ಹಣವನ್ನು ನಮೂದಿಸದೇ ಮುಗ್ಧ ಜನರಿಂದ ಸಹಿ ಪಡೆದು ನಂತರ ಅವುಗಳಲ್ಲಿ ಹೆಚ್ಚಿನ ಹಣವನ್ನು ನಮೂದಿಸಿ ವಂಚನೆ ಮಾಡುತ್ತಿದ್ದ ಎಂದು ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿತ್ತಜನಕಾಂಗ ಕಸಿ ಯಶಸ್ವಿ

ಬೆಂಗಳೂರು: ಪಿತ್ತಜನಕಾಂಗದ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ ಮೂವರು ರೋಗಿಗಳಿಗೆ ಅಂಗಾಂಗ ಕಸಿ ಚಿಕಿತ್ಸೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ನಾರಾಯಣ ಹೆಲ್ತ್ ಸಿಟಿಯ ಅಂಗಾಂಗ ಕಸಿ ಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಸಂಜಯ್ ಕುಮಾರ್ ಗೋಜಾ ತಿಳಿಸಿದರು. ಪಿತ್ತಜನಕಾಂಗದ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ ಸತೀಶ್ (39), ವೆಂಕಟಸ್ವಾಮಿ(44) ಸುಗಿತಾ ಸತಿಯಸೀಲನ್(12) ಎಂಬ ಮೂವರು ರೋಗಿಗಳಿಗೆ ಅವರ ಸಂಬಂಧಿಗಳಿಂದಲೇ ಅಂಗಾಂಗಗಳನ್ನು ಪಡೆದು ಕಸಿಚಿಕಿತ್ಸೆ ಮಾಡಿದ್ದೇವೆ ಎಂದು ತಿಳಿಸಿದರು. ಸತೀಶ್ ಬಾಬು ಎಂಬುವವರು ಮದ್ಯವ್ಯಸನಿಯಾಗಿದ್ದರಿಂದ ಪಿತ್ತಜನಕಾಂಗದ ಸಮಸ್ಯೆಯಿಂದ ಬಳಲುತ್ತಿದ್ದರು. ಇವರಿಗೆ ಸಹೋದರಿಯ ಅಂಗ ಹೋಲಿಕೆಯಾಗುತ್ತಿದ್ದ ಪರಿಣಾಮ ಅವರದೇ ಅಂಗಾಂಗ ಕಸಿ ಮಾಡಿದ್ದೇವೆ. ವೆಂಟಕಸ್ವಾಮಿ ರೆಡ್ಡಿ ಎಂಬುವರು ಪಿತ್ತಜನಕಾಂಗದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಅವರ ಸಹೋದರನ ಅಂಗ ಪಡೆದು ಕಸಿಚಿಕಿತ್ಸೆ ಮಾಡಲಾಗಿದೆ. ಸುಗಿತಾ ಸತಿಯಸೀಲನ್‌ಗೆ ಅವರ ತಂದೆಯ ಪಿತ್ತಜನಕಾಂಗನ್ನು ಕಸಿ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದರು.

ಬ್ಯಾಕ್‌ಲಾಗ್ ಹುದ್ದೆಗಳಿಗೆ ನಿಯಮಾವಳಿ ಬದಲಿಸಲು ಒತ್ತಾಯ

ಬೆಂಗಳೂರು: ಸರಕಾರದ ವಿವಿಧ ಇಲಾಖೆಗಳಲ್ಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಮಿತಿ ರಚಿಸಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ ಆಗ್ರಹಿಸಿದೆ.

ಕಳೆದ ಐದು ವರ್ಷಗಳಿಂದ ಸರಕಾರಕ್ಕೆ ನಿಯಮಾವಳಿ ಪರಿಷ್ಕರಿಸಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಲಾಗುತ್ತಿದೆ. ಕಳೆದ ಕಾಂಗ್ರೆಸ್ ಸರಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದ ಎಚ್. ಆಂಜನೇಯ ಅವರು ವರ್ಷದೊಳಗೆ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಭರವಸೆ ಕೊಟ್ಟಿದ್ದರು.

ಅದು ಈಗ ಹುಸಿಯಾಗಿದೆ. 2016ರ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆಗೆ ಬರೆದ ಪತ್ರವೂ ಸಹ ಧೂಳು ಹಿಡಿದಿದೆ ಎಂದು ಸಂಘದ ಅಧ್ಯಕ್ಷ ವಿ.ಲೋಕೇಶ್ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 18 ವರ್ಷಗಳಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದ ಕಾರಣ ವಯೋಮಿತಿ ಮೀರಿದ್ದು, ಗರಿಷ್ಠ ವಯೋಮಿತಿಯನ್ನು 40ರಿಂದ 47ಕ್ಕೆ ಏರಿಸುವುದು ಸೂಕ್ತವಾಗಿರುತ್ತದೆ.

ಅಂದಾಜು 5 ಸಾವಿರಕ್ಕೂ ಅಧಿಕ ಎ,ಬಿ ವರ್ಗದ ತಾಂತ್ರಿಕೇತರ ಹಾಗೂ 'ಸಿ' ವರ್ಗದ ಎಸ್ಸಿ,ಎಸ್ಟಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಸಮಿತಿ ರಚಿಸಿ ಶೀಘ್ರ ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಉಪಾಧ್ಯಕ್ಷ ಶೇಖರ್, ಕಾರ್ಯಾಧ್ಯಕ್ಷ ಶಿವಣ್ಣ ಇತರರು ಇದ್ದರು.

ಸ್ಟ್ಯಾಚ್ಯೂ ಆಫ್ ಯೂನಿಟಿ ಉದ್ಘಾಟನೆಗೆ ಅಧಿಕೃತ ಆಹ್ವಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗುಜರಾತ್‌ನಲ್ಲಿ ನಿರ್ಮಾಣವಾಗಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆ 'ಸ್ಟ್ಯಾಚ್ಯೂ ಆಫ್ ಯೂನಿಟಿ' ಉದ್ಘಾಟನೆ ಕಾರ್ಯಕ್ರಮಕ್ಕೆ ಗುಜರಾತ್ ತಂಡ ರಾಜ್ಯದ ಜನತೆಗೆ ಅಧಿಕೃತ ಆಹ್ವಾನ ನೀಡಿದೆ.

ಬಿಬಿಎಂಪಿ ಕಚೇರಿಯಲ್ಲಿ ನಡೆದ ಸಭೆಯ ನಂತರ ರಾಜ್ಯದ ಜನತೆಗೆ ಅಧಿಕೃತ ಆಹ್ವಾನ ನೀಡಿದ ಸೌರಬ್ ಪಾಟೀಲ್, ಸರ್ದಾರ್ ವಲ್ಲಭಬಾಯಿ ಪಟೇಲ್ ಅವರಿಗೆ ಸಿಗಬೇಕಾದ ಗೌರವ ನೀಡುವಲ್ಲಿ ಹಿಂದಿನ ಸರಕಾರಗಳು ವಿಫಲವಾಗಿದ್ದವು. ಆದರೆ, ನಮ್ಮ ಸರಕಾರ ಜಗತ್ತಿನ ಅತಿದೊಡ್ಡ ಪ್ರತಿಮೆ ನಿರ್ಮಾಣ ಮಾಡುವ ಮೂಲಕ ಅವರಿಗೆ ಗೌರವ ಸಲ್ಲಿಸಿದೆ. ಈ ಯೋಜನೆಗೆ ಸುಮಾರು 2,300 ಕೋಟಿ ರುಪಾಯಿ ವ್ಯಯಿಸಲಾಗಿದೆ ಎಂದು ತಿಳಿಸಿದರು.

ಪ್ರತಿಮೆಯು ಸುಮಾರು 182 ಅಡಿ ಎತ್ತರವಿದ್ದು, ಜಗತ್ತಿನ ಅತಿ ಎತ್ತರದ ಪ್ರತಿಮೆ ಎನಿಸಿಕೊಂಡಿದೆ. 28 ರಾಜ್ಯಗಳ 1.70 ಸ್ಥಳಗಳಲ್ಲಿ ಸಂಗ್ರಹಿಸಿದ ಲೋಹದಿಂದ ಪ್ರತಿಮೆ ನಿರ್ಮಾಣ ಮಾಡಲಾಗಿತ್ತು. 2013ರಲ್ಲಿ ಪ್ರತಿಮೆ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಗಿತ್ತು ಎಂದು ಹೇಳಿದರು.

ಅಕ್ಟೋಬರ್ 31ರಂದು ಪ್ರತಿಮೆಯ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೇಶದ ಎಲ್ಲ ರಾಜ್ಯಗಳಿಗೆ ಗುಜರಾತ್ ನಿಯೋಗ ತೆರಳಿ ಜನತೆಗೆ ಅಧಿಕೃತ ಆಹ್ವಾನ ನೀಡುತ್ತಿದೆ. ಸೋಮವಾರ ಬೆಂಗಳೂರಿನ ಬಿಜೆಪಿ ಕೇಂದ್ರ ಕಚೇರಿಯಲ್ಲಿ ರಾಜ್ಯದ ಜನತೆಗೆ ಆಹ್ವಾನ ನೀಡಲಾಯಿತು. ನಿಯೋಗದಲ್ಲಿ ಗುಜರಾತ್ ಸಚಿವರಾದ ಜಯದ್ರತ ಸಿಂಗ್ ಪರಮಾರ, ಭಾರತ ಬಾಯ್ ಪಾಟೀಲ್, ಭಿಕಬಾಯ್ ಭರಯ್ಯಾ ಇದ್ದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿರಿಯ ಮುಖಂಡ ರಾಮಚಂದ್ರಗೌಡ, ಪರಿಷತ ಸದಸ್ಯರಾದ ಲೆಹರ್ ಸಿಂಗ್, ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಮುನಿರಾಜು, ಪಿ.ಎನ್.ಸದಾಶಿವ ಇದ್ದರು.

ವಿಚ್ಛೇದನ: ಮನನೊಂದು ಮಹಿಳೆ ಆತ್ಮಹತ್ಯೆ

ಬೆಂಗಳೂರು: ವಿಚ್ಛೇದನದಿಂದ ಮನನೊಂದ ಮಹಿಳೆಯೊಬ್ಬರು ಮೊಬೈಲ್‌ನಲ್ಲಿ ವಿಡಿಯೊ ಮಾಡಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಈಜೀಪುರದಲ್ಲಿ ನಡೆದಿದೆ.

ಅಪರಾಧ ಸುದ್ದಿಗಳು

ನೇಪಾಳ ಮೂಲದ ಅಂಕಿತಾ ಪೂಜಾರಿ (32)ಆತ್ಮಹತ್ಯೆಗೆ ಶರಣಾದ ಮಹಿಳೆ. ಕೆಲ ತಿಂಗಳ ಹಿಂದೆಯಷ್ಟೆ ಮೊದಲ ಪತಿಯಿಂದ ಅಂಕಿತ ಪೂಜಾರಿಗೆ ವಿಚ್ಛೇದನವಾಗಿತ್ತು. ಆ ನಂತರ ಸೋನಂ ಎಂಬಾತನೊಂದಿಗೆ ಎರಡನೇ ಮದುವೆಯಾಗಿದ್ದರು. ಆದರೆ, ವೈಮನಸ್ಸಿನಿಂದ ಇಬ್ಬರೂ ಬೇರೆ ಬೇರೆಯಾಗಿದ್ದರು. ಇದರಿಂದ ಮನನೊಂದಿದ್ದ ಮಹಿಳೆ, ಮೊದಲ ಪತಿಯನ್ನು ನೆನೆದು ಭಾವುಕಳಾಗಿ ಮೊಬೈಲ್‌ನಲ್ಲಿ ವಿಡಿಯೊ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ವಿವೇಕನಗರ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಾರೆಂಟ್ ಇಲ್ಲದೆ ನಡೆಸಿದ ದಾಳಿ ಕಾನೂನು ಬಾಹಿರ

ಬೆಂಗಳೂರು: ಕ್ವಿಂಟ್ ಹಾಗೂ ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆಗಳ ಮೇಲೆ ಭಾರತೀಯ ಹಣಕಾಸು ಇಲಾಖೆಯ ಜಾರಿ ನಿರ್ದೇಶನಾಲಯ ವಾರೆಂಟ್ ಇಲ್ಲದೆ ದಾಳಿ ಮಾಡಿರುವುದು ಕಾನೂನುಬಾಹಿರ ಎಂದು ಐಕ್ಯಮತ ವೇದಿಕೆ ತಿಳಿಸಿದೆ.ಎಎಸ್‌ಜಿ ಸಂಸ್ಥೆಯ ಸದಸ್ಯ ಲಿಯೋ ಸಾಲ್ಡಾನಾ ಮಾತನಾಡಿ, ನಾವು ಈ ದಾಳಿಯನ್ನು ಕೇವಲ ಈ ಎರಡು ಸಂಸ್ಥೆಗಳ ಮೇಲೆ ನಡೆದ ದಾಳಿಯೆಂದು ಪರಿಗಣಿಸುವುದಿಲ್ಲ. ಬದಲಾಗಿ ಈ ದಾಳಿಯು ಸಾಮಾನ್ಯವಾಗಿ ಸಾಮಾಜಿಕ ಸೇವಾ ಸಂಸ್ಥೆ ಹಾಗೂ ಮಾಧ್ಯಮಗಳನ್ನೂ ಒಳಗೊಂಡಿತ್ತು. ಅದರಲ್ಲೂ ಪ್ರಮುಖವಾಗಿ, ಶೋಷಣೆಗೆ ಒಳಪಟ್ಟ ಸಮುದಾಯಗಳ ಜತೆ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಮಂಗಳಮುಖಿಯರು, ಲೈಂಗಿಕ ಕಾರ್ಯನಿರತ ಸಮುದಾಯಗಳ ಜತೆ ಅವರ ಹಕ್ಕುಗಳಿಗಾಗಿ ತೊಡಗಿಕೊಂಡ ಕಾರ್ಯಕರ್ತರು ಹಾಗೂ ಪತ್ರಕರ್ತರನ್ನೇ ಗುರಿ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಿಕ್ರಮ್ ಸಂಸ್ಥೆಯ ಸದಸ್ಯ ಮ್ಯಾಥ್ಯೂ ಫಿಲಿಪ್, ಗ್ರೀನ್ ಪೀಸ್ ಪ್ರಾಯೋಜಕಿ ನಂದಿನಿ ಇದ್ದರು.

ಸಭೆ ಸಮಾರಂಭ

ಶರನ್ನವರಾತ್ರೋತ್ಸವ
ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ನಂಜನಗೂಡು, 5ನೇ ಬಡಾವಣೆ, ಜಯನಗರ
ಆಯೋಜನೆ: ಶ್ರೀ ರಾಘವೇಂದ್ರಸ್ವಾಮಿ ಮಠ
ಸಮಯ: ಬೆಳಗ್ಗೆ 7.30

ಸ್ವಾನುಭವ ವಿಷಯ ಕುರಿತು ಉಪನ್ಯಾಸ
ಸ್ಥಳ: ವೇದಾಂತ ನಿಲಯ, ಸಾಕಮ್ಮ ಗಾರ್ಡನ್ಸ್, ಬಸವನಗುಡಿ
ಆಯೋಜನೆ: ವೇದಾಂತ ಸತ್ಸಂಗ ಕೇಂದ್ರ
ಉಪಸ್ಥಿತಿ: ಡಾ. ಕೆ.ಜಿ.ಸುಬ್ರಾಯ ಶರ್ಮಾ, **ಸಮಯ:** ಬೆಳಗ್ಗೆ 9

ಪ್ರತಿಶಾಸ್ತ್ರ ಅಧ್ಯಯನ ಮತ್ತು ಸಂರಕ್ಷಣೆ ಕುರಿತು ಕಾರ್ಯಾಗಾರ
ಸ್ಥಳ: ಕೆಎಸ್‌ಯು ಸಭಾಂಗಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಉಪಸ್ಥಿತಿ: ಕ.ಸಂ.ವಿ ಕುಲಪತಿ ಪ್ರೊ. ಪದ್ಮಶೇಖರ್, ಡಾ. ನಾ. ಗೀತಾಚಾರ್ಯ, ಡಾ. ಜಿ.ವಿ.ಕಲ್ಲಾಪುರ,
ಸಮಯ: ಬೆಳಗ್ಗೆ 10.30

ವಿಶ್ವ ಆಹಾರ ದಿನದ ಉದ್ಘಾಟನಾ ಸಮಾರಂಭ
ಸ್ಥಳ: ಡಾ. ಎಚ್.ಆರ್.ಅರಕೇರಿ ಸಭಾಂಗಣ, 15 ಐಎಟಿ, ಕ್ವೀನ್ಸ್ ರಸ್ತೆ
ಉಪಸ್ಥಿತಿ: ಬಿ.ವೈ.ಶ್ರೀನಿವಾಸ್
ಸಮಯ: ಬೆಳಗ್ಗೆ 11

ಸಂವಹನ ಕೂಟದ ಉದ್ಘಾಟನೆ
ಸ್ಥಳ: ಹಳೆಯ ಪರೀಕ್ಷಾ ಭವನ, ಸೆಮಿನಾರ್ ಹಾಲ್,ಜ್ಞಾನಭಾರತಿ ಆವರಣ
ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸಂವಹನ ವಿಭಾಗ
ಉಪಸ್ಥಿತಿ: ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಎಂ.ಸಿದ್ದರಾಜು
ಸಮಯ: ಬೆಳಗ್ಗೆ 11

ವನ್ಯಜೀವಿ ಛಾಯಾಚಿತ್ರ ಪ್ರದರ್ಶನ



ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ
ಉಪಸ್ಥಿತಿ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ
ಸಮಯ: ಬೆಳಗ್ಗೆ 11.30

ಪುಸ್ತಕೋತ್ಸವ ಪುಸ್ತಕ ಸಂಸ್ಕೃತಿ ಒಂದು ಸಂವಾದ ಕಾರ್ಯಕ್ರಮ
ಸ್ಥಳ: ಬೆಂಗಳೂರು ಪುಸ್ತಕೋತ್ಸವ ಸಾಂಸ್ಕೃತಿಕ ವೇದಿಕೆ, ತ್ರಿಪುರವಾಸಿನಿ, ಅರಮನೆ ಮೈದಾನ
ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ
ಉಪಸ್ಥಿತಿ: ಡಾ. ವಸುಂಧರಾ ಭೂಪತಿ
ಸಮಯ: ಸಂಜೆ 5

ಡಾ. ವಿಷ್ಣುವರ್ಧನ ಕಲಾ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ
ಸ್ಥಳ: ಶ್ರೀ ಕೃಷ್ಣರಾಜ ಪರಿಷನ್ಮಂದಿರ,ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ
ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು
ಉಪಸ್ಥಿತಿ: ಸಚಿವ ಡಾ. ಡಿ.ಸಿ.ತಮ್ಮಣ್ಣ
ಸಮಯ: ಸಂಜೆ 5.30

ಶ್ರೀನಿವಾಸ ಕಲ್ಯಾಣ ವಿಷಯ ಕುರಿತು ಉಪನ್ಯಾಸ
ಸ್ಥಳ: ಪೂರ್ಣಪ್ರಜ್ಞಾ ವಿದ್ಯಾಪೀಠ, ಕತ್ರಿಗುಪ್ಪೆ, ಮುಖ್ಯ ರಸ್ತೆ
ಆಯೋಜನೆ: ಚಾತುರ್ಮಾಸ್ಯ ಸ್ವಾಗತ ಸಮಿತಿ, **ಸಮಯ:** ಸಂಜೆ 6.30

'ಈಶಾನತ್ವಂ' ಕುರಿತು ಉಪನ್ಯಾಸ
ಸ್ಥಳ: ಅಧ್ಯಾತ್ಮ ಮಂದಿರ, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿ.ವಿ.ಪುರಂ
ಆಯೋಜನೆ: ಪಾರಮಾರ್ಥ ವಿಚಾರ ಸಂಘ ಟ್ರಸ್ಟ್, **ಉಪಸ್ಥಿತಿ:** ಡಾ. ಕೆ.ಜಿ ಸುಬ್ರಾಯಶರ್ಮಾ
ಸಮಯ: ಸಂಜೆ 6.45

ಓದುಗರ ಗಮನಕ್ಕೆ: ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಕೃತಿ ಬಿಡುಗಡೆ, ಕಲಾ ಪ್ರದರ್ಶನ ಮತ್ತು ಇತರೆ ಸಮಾಜಮುಖಿ ಕಾರ್ಯಕ್ರಮಗಳ ಮಾಹಿತಿ ಮತ್ತು ವಿವರವನ್ನು ಮುಂಚಿತವಾಗಿ ಪತ್ರಿಕೆಗೆ ಕಳುಹಿಸಿ ಕೊಡಬಹುದು. ನಿಮ್ಮ ಕಾರ್ಯಕ್ರಮ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ:** ವಿಶ್ವವಾಣಿ ದಿನಪತ್ರಿಕೆ, ಎರಡನೇ ಮಹಡಿ, ನಂ.1687, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ದೇವಾಲಯದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098
ಇ-ಮೇಲ್ ವಿಳಾಸ: vishvavaninews@gmail.com ಇಲ್ಲಿಗೆ ಕಳುಹಿಸಬಹುದು.

ದಸರಾ ಹಬ್ಬದ ಪ್ರಯುಕ್ತ ವಿಧಾನಸೌಧವನ್ನು ಸಿಬ್ಬಂದಿ ಸ್ವಚ್ಛಗೊಳಿಸುತ್ತಿರುವುದು.

ದುಬೈನಲ್ಲಿ ವಚನ ಸಾಹಿತ್ಯ ಸಮ್ಮೇಳನ 26ರಂದು

ಬೆಂಗಳೂರು: ರಾಷ್ಟ್ರೀಯ ಬಸವ ಪ್ರತಿಷ್ಠಾನ ಹಾಗೂ ದಿವ್ಯಜ್ಯೋತಿ ಸೇವಾ ಟ್ರಸ್ಟ್ ನಿಂದ ಅ.26ರಂದು ಮಧ್ಯಾಹ್ನ 2 ಗಂಟೆಗೆ ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈ ನಗರದ ಬಿಲ್ವ-ಇಂಡಿಯಾ ಶಾಲೆಯಲ್ಲಿ ಅಂತಾರಾಷ್ಟ್ರೀಯ ವಚನ ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗಿದೆ.

ತರಳಬಾಳು ಶಾಖಾಮಠದ ಪೀಠಾಧ್ಯಕ್ಷ ಶ್ರೀ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದು, ಇಸ್ರೋ ಮಾಜಿ ಅಧ್ಯಕ್ಷ ಹಾಗೂ ಎಸ್‌ಟಿಐಎಸಿ ಸದಸ್ಯ ಡಾ. ಎ.ಎಸ್.ಕಿರಣ್ ಕುಮಾರ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ರಾಷ್ಟ್ರೀಯ ಬಸವ ಪ್ರತಿಷ್ಠಾನದ ಅಧ್ಯಕ್ಷ ಲೋಕೇಶ್ವರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಾಮಾಜಿಕ ಸಮಾನತೆ, ಜಾತ್ಯತೀತ ಪರಿಕಲ್ಪನೆ ಹಾಗೂ ಲಿಂಗ ಸಮಾನತೆ ಸಾರುವ ನಿಟ್ಟಿನಲ್ಲಿ ಬಸವಾದಿ ಶಿವಶರಣರ ವಚನ ಸಾಹಿತ್ಯದ ತಿರುಳುಗಳನ್ನು ವಿಶ್ವದಾದ್ಯಂತ ವಿಸ್ತರಿಸುವ ದೃಷ್ಟಿಯಿಂದ ಈ ಅಂತಾರಾಷ್ಟ್ರೀಯ ವಚನ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ 2 ಸಾವಿರಕ್ಕೂ ಹೆಚ್ಚು ಕನ್ನಡಿಗರು ಪಾಲ್ಗೊಳ್ಳಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ವಿಚಾರಗೋಷ್ಠಿ, ನಾಡಿನ ಹೆಸರಾಂತ ಚಿಂತಕರು ಹಾಗೂ ಸಮಾಜ ಸೇವಕರನ್ನು ಗುರುತಿಸಿ 'ಅಕ್ಕ ಕಾಯಕರತ್ನ 'ಪ್ರಶಸ್ತಿ ನೀಡಲಾಗುವುದು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಮಹಂತೇಶ್ ಕವಟಗಿ ಮಠ್, ರಾಜ್ಯಸಭಾ ಸದಸ್ಯ ಡಾ. ಪ್ರಭಾಕರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.